## ಸಿವಿಲ್ ಮತ್ತು ಜೆ.ಎಮ್.ಎಫ್.ಸಿ. ರವರ ನ್ಯಾಯಾಲಯ, ಯಾದಗಿರಿ

### ಸಿ.ಸಿ ನಂ. 101/2015

| | | | |
|---|---|---|---|
| ಸಾಕ್ಷಿಯ ಹೆಸರು | ಲಕ್ಷ್ಮಣ | ಚಾಸಾ- | 3 |
| ತಂದೆ ಹೆಸರು | ರೆಖ್ಯಾ ನಾಯಕ | ಪ್ರಾಸಾ- | 3 |
| ವಯಸ್ಸು | 45 ವರ್ಷ | ದಿ ಃ 14-08-2018 | |
| ಉದ್ಯೋಗ | ಒಕ್ಕಲುತನ | | |
| ವಾಸಸ್ಥಳ | ಬೋರಬಂಡಾ | | |

**ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು.**

ಸಾಕ್ಷಿಗೆ ಹಿಂದಿ ಬರುತ್ತಿದ್ದು ಅವರಿಗೆ ಹಿಂದಿಯಲ್ಲಿ ಪ್ರಶ್ನೆಯನ್ನು ಕೇಳಿ ಅವರು ಹೇಳಿದ ಉತ್ತರವನ್ನು ಕನ್ನಡಕ್ಕೆ ಭಾಷಾಂತರಿಸಿ ಸಾಕ್ಷ್ಯವನ್ನು ತೆಗೆದುಕೊಳ್ಳಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಹಿ.ಸ.ಸ.ಅ ರವರಿಂದ ಃ-**

ನನಗೆ ಚಾಸಾ 2 ರವರ ಪರಿಚಯ ಇರುವುದಿಲ್ಲ. ಯಾವ ದಿನಾಂಕದಂದು ಏನಾಗಿರುತ್ತದೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಗುನ್ಹೆ ಪಂಚನಾಮೆ ಮಾಡಿರುವುದಿಲ್ಲ. ಸಾಕ್ಷಿಗೆ ಒಂದು ಗುನ್ಹೆ ಪಂಚನಾಮೆಯನ್ನು ತೋರಿಸಿದ್ದು ಅದನ್ನು ನೋಡುತ್ತಿದ್ದು ಅದರಲ್ಲಿ ಇರುವ ಸಹಿ ನನ್ನದು ಇರುತ್ತದೆ ದಾಖಲೆಯನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದೆ. ನಿಪಿ 3 ರಲ್ಲಿ ಇರುವ ವಿಷಯ ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಹಿ.ಸ.ಸ.ಅ. ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದರು – ಅನುಮತಿ ನೀಡಲಾಯಿತು)**

**ಪಾಟೀಸವಾಲು – ಮಾನ್ಯ ಹಿ.ಸ.ಸ.ಅ. ರವರಿಂದ ಃ-**

ದಿಃ 28.6.2014 ರಂದು ಸಾಯಂಕಾಲ 5.30 ರಿಂದ 6.30 ಗಂಟೆ ಒಳಗಡೆ ನನ್ನನ್ನು ಹಾಗೂ ಚಾಸಾ 2 ರವರನ್ನು ಬೆಟ್ಟದಹಳ್ಳಿಯಿಂದ ಧರ್ಮಪೂರಕಡೆಗೆ ಬರುವ ರಸ್ತೆಯ ಮೇಲೆ

ಚಿನ್ನಾಕರ ಸಿಮಾಂತರದ ಷಮ್ಮುಖಪ್ಪ ಕುರುಬರ ಇವರ ಹೊಲದಲ್ಲಿ ಕರೆಯಿಸಿ ಚಾಸಾ 6 ರವರು ತೊರಿಸಿದ ಮೇರೆಗೆ ಗುನ್ಹೆ ಜಾಗೆಯ ಪಂಚನಾಮೆಯನ್ನು ಮಾಡಿ ಅದರಡಿ ಅಪಘಾತದ ಪಡಿಸಿದ ವಾಹನ ಐಶರ ಕಂಪನಿಯ ಗೂಡಸ್ ವಾಹನ ನಂ. ಕೆಎ-19-ಬಿ-2331 ನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈಗ ವಿವರವಾಗಿ ಓದಿ ಹೇಳಿದಂತೆ ನಿಪಿ 3 ರಂತೆ ಪೋಲಿಸರು ನನ್ನ ಸಮಕ್ಷಮ ಗುನ್ಹೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು–ಆರೋಪಿತರ ಪರವಾಗಿ ಶ್ರೀ. ಎಂ.ಎಂ.ಇ. ವಕೀಲರಿಂದ**

ಯಾವುದೇ ಪಾಟೀ ಸವಾಲು ಇಲ್ಲ.

**ಮರುವಿಚಾರಣೆ – ಇಲ್ಲ**

**(ತೇರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಅದೆ**

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಯಾದಗಿರಿ**